P.W. 1

(ಇಂದು ದಿನಾಂಕ 14–10–2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆಃ ಫಿರ್ಯಾದಿದಾರರ ಪರ ಶ್ರೀ ಆರ್.ವಿ.ಬಿ. ವಕೀಲರಿಂದಃ**

ನಾನು ಈ ಹಿಂದೆ ನನ್ನ ಪ್ರಮಾಣಪೂರ್ವಕ ಹೇಳಿಕೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು, ಅದನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಅಳವಡಿಸಿಕೊಳ್ಳಲು ಮೆಮೊ ಸಲ್ಲಿಸಿರುತ್ತೇನೆ.

ನಾನು ಖಾಸಗಿ ಫಿರ್ಯಾದಿಯೊಂದಿಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಐ.ಡಿ.ಬಿ.ಐ. ಗೆ ಸೇರಿದಂತಹ ದಿನಾಂಕ 22–09–2023 ರ ಚೆಕ್ಕನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಸದರಿ ಚೆಕ್ಕಿಗೆ ಆರೋಪಿ ಸಹಿ ಹಾಕಿದ್ದು ಅದನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಬ್ಯಾಂಕಿನವರು ಕೊಟ್ಟ ಹಿಂಬರವನ್ನು ನಿ.ಪಿ.2 ಎಂದು, ಆರೋಪಿಗೆ ಕೊಟ್ಟಂತಹ ಲೀಗಲ್ ನೋಟಿಸ್‌ನ ಕಚೇರಿ ಪ್ರತಿ ನಿ.ಪಿ.3 ಎಂದು, ಅಂಚೆ ಲಕೋಟೆಯನ್ನು ನಿ.ಪಿ.4 ಎಂದು, ಅಧಿಕಾರ ಪತ್ರವನ್ನು ನಿ.ಪಿ.5 ಎಂದು, ಠರಾವಿನ ಪ್ರತಿಯನ್ನು ನಿ.ಪಿ.6 ಎಂದು, ವ್ಯಾಪಾರ ಸಾಲದ ಅರ್ಜಿಯನ್ನು ನಿ.ಪಿ.7 ಎಂದು, ಸಾಲ ಮಂಜೂರಾತಿ ಪತ್ರವನ್ನು ನಿ.ಪಿ. 8 ಎಂದು, ಸಾಲದ ಕರಾರನ್ನು ನಿ.ಪಿ. 9 ಎಂದು, ಮುದ್ದತಿ ವಚನ ಪತ್ರವನ್ನು ನಿ.ಪಿ.10 ಎಂದು, ಡಿಮಾಂಡ ಪ್ರಾಮಿಸರಿ ನೋಟ್‌ನ್ನು ನಿ.ಪಿ.11 ಎಂದು, ಹೈಪೊಥಿಕೇಶನ್ ಅಗ್ರಿಮೆಂಟ್‌ನ್ನು ನಿ.ಪಿ.12 ಎಂದು, ಆರೋಪಿಯ ಸಾಲದ ಖಾತೆಗೆ ಸಂಬಂಧಪಟ್ಟ 2 ಬ್ಯಾಂಕ್ ಸ್ಟೇಟಮೆಂಟ್‌ಗಳನ್ನು ನಿ.ಪಿ.13 ಮತ್ತು ನಿ.ಪಿ.14 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ